ಆ) ವಿದೇಶಿ ವಿನಿಮಯದಲ್ಲಿ ಕರ್ನಾಟಕ ರೇಷ್ಮೆ ಯಾವ ಸ್ಥಾನದಲ್ಲಿದೆ

ಇ) ಉತ್ತಮವಾದ ರೇಷ್ಮೆಗೆ ಮಾರುಕಟ್ಟೆಯಲ್ಲಿ ಸ್ಥಾನ ಸಿಕ್ಕಿದೆಯೇ ಸಿಗದಿರಲು ಕಾರಣವೇನು

ಈ) ರೇಷ್ಮೆಗೆ ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ಸಿಗುತ್ತದೆಯೇ ಸಿಗದಿದ್ದ ಪಕ್ಷದಲ್ಲಿ ಕಾರಣವೇನು

ಉ) ಕರ್ನಾಟಕದ ರೇಷ್ಮೆಗೆ ವಿದೇಶದಲ್ಲಿ ಬೇಡಿಕೆ ಇದೆಯೇ ಯಾವ ಪ್ರಮಾಣದಲ್ಲಿ ಬೇಡಿಕೆ ಇಲ್ಲದಿದ್ದರೆ ಕಾರಣವೇನು?

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು)

ಅ) ಆ ಸಂಬಂಧದ ವಿವರ ಕೆಳಕಂಡಂತಿದೆ

ವರ್ಷ	ರೇಷ್ಮೆಯ ಪ್ರಮಾಣ (ಮೆ ಟನ್)	ರೇಷ್ಮೆಯ ಮೌಲ್ಯ (ರೂ ಲಕ್ಷಗಳಲ್ಲಿ)
2001–02	1674	17759
2002–03	1604	12912

ಆ) 2002–03ನೇ ಸಾಲಿನಲ್ಲಿ ರೇಷ್ಮೆಯಿಂದ ರಾಷ್ಟ್ರದ ವಾರ್ಷಿಕ ವಿದೇಶಿ ವಿನಿಮಯ ಗಳಿಕೆ ರೂ 2294 ಕೋಟಿ ಆಗಿದ್ದು ಅದರಲ್ಲಿ ರಾಜ್ಯದಿಂದ ರಫ್ತಾಗಿರುವ ಉತ್ಪನ್ನಗಳ ಮೌಲ್ಯ ರೂ 746 ಕೋಟಿಗಳಷ್ಟಿದೆ

ಇ) ಸಿಕ್ಕಿದೆ

ಈ) ಸಿಗುತ್ತಿದೆ

ಉ) ರಾಷ್ಟ್ರದಲ್ಲಿ ಉತ್ಪಾದನೆಯಾಗುತ್ತಿರುವ ಕಚ್ಚಾ ರೇಷ್ಮೆಯ ಗುಣಮಟ್ಟ ಕಡಿಮೆ ಇರುವುದರಿಂದ ಅದಕ್ಕೆ ವಿದೇಶದಲ್ಲಿ ಬೇಡಿಕೆ ಇರುವುದಿಲ್ಲ ಆದರೆ, ಬಟ್ಟೆ ಮತ್ತು ರೇಷ್ಮೆಯ ಇತರೆ ವಸ್ತುಗಳಿಗೆ ಬೇಡಿಕೆ ಇದೆ ಭಾರತದಿಂದ ಪ್ರತಿ ವರ್ಷ ಸುಮಾರು ರೂ 2294 ಕೋಟಿಗಳಷ್ಟು ಬಟ್ಟೆ ಮತ್ತು ಇತರೆ ಉತ್ಪನ್ನಗಳು ಹೊರದೇಶಗಳಿಗೆ ರಫ್ತಾಗುತ್ತದೆ ರಾಷ್ಟ್ರದಲ್ಲಿನ ರೇಷ್ಮೆ ಉತ್ಪಾದನೆಯಲ್ಲಿ ರಾಜ್ಯದ ಪಾಲು ಶೇಕಡಾ 57ರಷ್ಟಿದ್ದು ದೇಶದ ರೇಷ್ಮೆ ಬಟ್ಟೆ ಉತ್ಪಾದನೆಯಲ್ಲಿ ಕೆಯಾಗುತ್ತಿದೆ

ಕೈಮಗ್ಗ ನೇಕಾರರಿಗಾಗಿ ಕೇಂದ್ರ ಸರ್ಕಾರದ ವಿಶೇಷ ಯೋಜನೆ

232 (559) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೈಮಗ್ಗ ನೇಕಾರರಿಗೆ ಕೆಂದ್ರ ಸರ್ಕಾರ ಯಾವುದಾದರೂ ವಿಶೇಷ ಯೋಜನೆಯನ್ನು ರೂಪಿಸಿದೆಯೆ ಹಾಗಿದ್ದಲ್ಲಿ ಅದರ ವಿವರ ನೀಡುವುದೆ

ಆ) ಕೇಂದ್ರ ಸರ್ಕಾರ ಹತ್ಖರ್ಗಾ ಪ್ರೋತ್ಸಾಹ ಯೋಜನೆಯಡಿ ರಾಜ್ಯ ಸರ್ಕರಕ್ಕೆ ಎಷ್ಟು ಹಣ ನೀಡಿದೆ

ಇ) ಇದರಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ಈ ನೆರವಿನ ಹಣವನ್ನು ರಾಜ್ಯ ಸರ್ಕಾರ ಇಲ್ಲಿಯವರೆಗೂ ಬಳಸದೆ ಇರುವುದು ನಿಜವೆ

ಈ) ಇದಕ್ಕೆ ರಾಜ್ಯ ಸರ್ಕಾರ ಕೈಮಗ್ಗ ನೇಕಾರರ ಬಗ್ಗೆ ಇರುವ ನಿರ್ಲಕ್ಷ ಧೋರಣೆಯೆ ಕಾರಣವಲ್ಲವೆ?

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು)

ಅ) ಹೌದು ಆ ಯೋಜನೆಗಳು ಈ ಕೆಳಕಂಡಂತಿವೆ

1 ದೀನದಯಾಳ್ ಹತ್‌ಕರ್ಗಾ ಪ್ರೋತ್ಸಾಹನಾ ಯೋಜನೆ

2 ನೇಕಾರರ ವಸತಿ ಕಾರ್ಯಾಗಾರ ಯೋಜನೆ

3 ಆರೋಗ್ಯ ಬುತ್ತಿ ಯೋಜನೆ

4 ಗುಂಪು ವಿಮಾ ಯೋಜನೆ

5 ಮಿತವ್ಯಯನಿಧಿ ಯೋಜನೆ

6 ಜಿಲ್ಲಾ ಮಟ್ಟದ ಉತ್ಪನ್ನಗಳು

7 ರಾಷ್ಟ್ರೀಯ ಕೈಮಗ್ಗ ಮೇಳ

8 ಸಮಗ್ರ ಕೈಮಗ್ಗ ತರಬೇತಿ ಯೋಜನೆ

ಆ) ಆ ವಿವರ ಈ ಕೆಳಕಂಡಂತಿದೆ ಕೆ ಕೈ.ಅ ನಿ–ರೂ 357 22 ಲಕ್ಷ ಕೈಮಗ್ಗ ಸಹಕಾರ ಸಂಘಗಳಿಗೆ
ರೂ 86 38 ಲಕ್ಷ
ಒಟ್ಟು ರೂ 443 60 ಲಕ್ಷ

ಇ) ಪೂರ್ಣ ಹಣವನ್ನು ಖರ್ಚು ಮಾಡಲಾಗಿದ್ದು ರಾಜ್ಯ ಸರ್ಕಾರದಲ್ಲಿ ಯಾವುದೇ ಹಣ ಬಾಗಿ ಇರುವುದಿಲ್ಲ

ಈ) ಉದ್ಭವಿಸುವುದಿಲ್ಲ

ರಾಜ್ಯದಲ್ಲಿರುವ ಕೈಮಗ್ಗಗಳು

233 (560) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಕೈಮಗ್ಗಗಳ ಸಂಖ್ಯೆ ಎಷ್ಟು ಉತ್ತರ ಕರ್ನಾಟಕ ಭಾಗದಲ್ಲಿ ಎಷ್ಟು ಕೈಮಗ್ಗಗಳು ಚಾಲ್ತಿಯಲ್ಲಿವೆ ಜಿಲ್ಲಾವಾರು ವಿವರ ನೀಡುವುದು

ಆ) ರಾಜ್ಯದಲ್ಲಿನ ಬಹುತೇಕ ಕೈಮಗ್ಗಗಳು ಮುಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಈ ಕೈಮಗ್ಗಗಳ ಪುನಶ್ಚೇತನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು

ಇ) ವಿದ್ಯಾವಿಕಾಸ್ ಯೋಜನೆಯಡಿ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಿಸಲು ಮತ್ತು ಸರ್ಕಾರದ ಎಲ್ಲಾ ಇಲಾಖೆಗಳ ನೌಕರರಿಗೆ ಸಮವಸ್ತ್ರ ನೀಡಲು ಬೇಕಾದ ಎಲ್ಲಾ ಬಟ್ಟೆಯನ್ನು ಕೆ ಹೆಚ್ ಡಿ ಸಿ ಯಿಂದಲೇ ಖರೀದಿಸುವಂತೆ ಸರ್ಕಾರ ಆದೇಶ ಹೊರಡಿಸಬಹುದಲ್ಲವೆ